ಅಗತ್ಯವೇ ಕಂಡುಬಂದಿಲ್ಲ ಗೊತ್ತೆ? ಅದೊಂದು ನಿಷ್ಪ್ರಯೋಜಕ ಬೆರಳು. ಅದರ ಮೇಲೆ ಪಣ ಕಟ್ಟಿದರೆ ಏನೂ ನಷ್ಟವಿಲ್ಲ! ಖಂಡಿತವಾಗಿಯೂ ಇದೊಂದು ಅದ್ಭುತವಾದ ಬೆಟ್!' ಎಂದ ಹುಡುಗ.

ಮುದುಕ ಅರ್ಥಗರ್ಭಿತ ನಗೆ ನಕ್ಕ. ನಮ್ಮ ಗ್ಲಾಸುಗಳು ಖಾಲಿಯಾಗುತ್ತಿದ್ದಂತೆ ಅವನು ಮತ್ತೊಮ್ಮೆ ತುಂಬಿಸಿದ.

'ನಾವು ಆಟ ಶುರು ಮಾಡುವ ಮೊದಲು ನಾನು ನನ್ನ ಈ ಕಾರಿನ ಕೀಯನ್ನು ರೆಫ್ರಿಗೆ ಕೊಡಬಯಸುತ್ತೇನೆ.' ಕೀಯನ್ನು ಹೊರತೆಗೆಯುತ್ತಾ ಮುದುಕ ಹೇಳಿದ. 'ಕಾರಿನ ಮಾಲೀಕತ್ವದ ಪತ್ರಗಳು ಮತ್ತು ವಿಮಾ ಪತ್ರಗಳು ಕಾರಿನೊಳಗೆಯೇ ಇವೆ.'

ಅಷ್ಟರಲ್ಲಿ ಕಪ್ಪು ಹೆಂಗಸು ಒಳಬಂದಳು. ಮುದುಕ ಹೇಳಿದ್ದ ವಸ್ತುಗಳನ್ನೆಲ್ಲಾ ಅವಳು ತಂದಿದ್ದಳು.

'ಥ್ಯಾಂಕ್ಸ್. ನೀನಿನ್ನು ಹೋಗಬಹುದು' ಎಂದು ಮುದುಕ ಹೇಳಿದ. ಅವಳು ಹೋಗುತ್ತಿದ್ದಂತೆ ಮುದುಕ ಅವಳು ತಂದ ವಸ್ತುಗಳನ್ನು ಬೆಡ್ಡಿನ ಮೇಲೆ ಜೋಡಿಸಿದ.

'ನಾವಿನ್ನು ಶುರು ಮಾಡುವ. ಈ ಮೇಜನ್ನು ಸ್ವಲ್ಪ ಮುಂದೆ ತರುವ. ನನಗೆ ಸ್ವಲ್ಪ ಸಹಾಯ ಮಾಡು' ಅವನು ಹುಡುಗನಿಗೆ ಕೇಳಿಕೊಂಡ.

ಅವರು ಮೇಜನ್ನು ಮುಂದೆ ತಂದು ಅದರ ಮೇಲೆ ಜೋಡಿಸಿದ್ದ ವಸ್ತುಗಳನ್ನು ನೆಲದ ಮೇಲೆ ಜೋಡಿಸಿದರು. ಮುದುಕ ತಾನು ಎಳೆ ಮಕ್ಕಳ ಪಾರ್ಟಿಯೊಂದನ್ನು ಆಯೋಜಿಸಿರುವವನಂತೆ ಪಾದರಸದಂತೆ ಚುರುಕಾಗಿ ಓಡಾಡುತ್ತಿದ್ದ. ಅವನು ಮೊಳೆಗಳನ್ನು ಹೆಕ್ಕಿ ಆರು ಇಂಚು ಅಂತರದಲ್ಲಿ ಮೇಜಿನ ಮೇಲೆ ಹೊಡೆದ. ಮೊಳೆಗಳು ಮೇಜಿನಿಂದ ಅರ್ಧ ಇಂಚು ಮಾತ್ರ ಹೊರಗೆ ಕಾಣಿಸುತ್ತಿದ್ದವು.

ನಾವು ಕೈಯಲ್ಲಿ ಮಾರ್ಟಿನಿ ಹಿಡಿದು ಮುದುಕನ ಕೆಲಸವನ್ನು ನೋಡುತ್ತಿದ್ದೆವು. ಹೊಡೆದ ಮೊಳೆಗಳನ್ನು ಅಲ್ಲಾಡಿಸುತ್ತಾ ಮುದುಕ ಅವುಗಳ ಬಲವನ್ನು ಪರೀಕ್ಷಿಸಿದ. ಅವನಿಗೆ ಸಮಧಾನವಾದಂತೆ ಕಾಣಿಸಿತು. ಘಾಟೀ ಮುದುಕ ಇಂತಾ ಆಟಗಳನ್ನು ಮೊದಲೂ ಬಹಳಷ್ಟು ಸಲ ಆಡಿರುವವನಂತೆ ನನಗೆ ಕಂಡ. 'ಒಂದು ಸಣ್ಣ ಹಗ್ಗ ಸಿಕ್ಕಿದರೆ ಎಲ್ಲಾ ತಯಾರಾದಂತೆ!' ಅವನೆಂದ. ಅವನಿಗೆ ಅದೂ ಕೂಡ ಸಿಕ್ಕಿತು.

'ಎಲ್ಲಾ ರೆಡಿ! ಶುರು ಮಾಡೋಣವೇ?'

ಮುದುಕ ಹುಡುಗನನ್ನು ಮೇಜಿನ ಬದಿಗೆ ಕುಳ್ಳಿರಿಸಿದ. ಅವನ ಕೈಗೆ ಹಗ್ಗದಲ್ಲಿ ಬಿಗಿದು, 'ನಿನ್ನ ಕೈಯನ್ನು ಈ ಮೊಳೆಗಳ ಮಧ್ಯೆ ಇಡು' ಎಂದು ಅವನ ಮಣಿಕಟ್ಟನ್ನು ಮೊಳೆಗಳ ಮಧ್ಯೆ ಇಡಿಸಿ ಹಗ್ಗದಿಂದ ಮೊಳೆಗಳಿಗೆ ಬಿಗಿದ. ಹುಡುಗ ಪ್ರಯತ್ನಪಟ್ಟರೂ ಕೈ ಹಿಂದೆ ಮುಂದೆ ಹೋಗಲೊಲ್ಲದು!

'ಈಗ... ಪ್ಲೀಜ್, ನಿನ್ನ ಕಿರುಬೆರಳನೊಂದನ್ನು ಬಿಟ್ಟು ಮುಷ್ಟಿಯನ್ನು ಬಿಗಿ ಮಾಡು.' ಮುದುಕ ಆದೇಶವಿತ್ತ. ಹುಡುಗ ಹಾಗೆಯೇ ಮಾಡಿದ.

'ಎಕ್ಸಲೆಂಟ್, ಎಕ್ಸಲೆಂಟ್! ನಿನ್ನ ಬಲಗೈಯಿಂದ ಲೈಟರ್ ಹಚ್ಚಬಹುದು. ನಾವೀಗ ರೆಡಿ!' ಅವನು ಬೆಡ್ಡಿನ ಮೇಲಿದ್ದ ಕತ್ತಿಯನ್ನು ತೆಗೆದುಕೊಂಡು ಬಂದು ಹುಡುಗನ ಬಗಲಿಗೆ ಹೋಗಿ ನಿಂತ.

'ಮಿಸ್ಟರ್ ರೆಫ್ರಿ...' ಮುದುಕ ನನ್ನನುದ್ದೇಶಿಸಿ ಹೇಳಿದ. 'ನೀವು ಅಪ್ಪಣೆ ಕೊಡುತ್ತಿದ್ದಂತೆ ಪಣ